# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 355
2. ಸದಸ್ಯರ ಹೆಸರು : ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ : 15.09.2022
4. ಉತ್ತರಿಸುವ ಸಚಿವರು : ಜಲಸಂಪನ್ಮೂಲ ಸಚಿವರು

| ಕ್ರ. ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಬಯಲುಸೀಮೆ ಜಿಲ್ಲೆಗಳಿಗೆ ಕುಡಿಯುವ ನೀರನ್ನು ಒದಗಿಸಲು ಎತ್ತಿನಹೊಳೆ ಯೋಜನೆಯಡಿ ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಯಲ್ಲಿ ಕೈಗೆತ್ತಿಕೊಳ್ಳಲಾಗಿರುವ ಕಾಮಗಾರಿಗಳು ಯಾವುವು; ಈ ಕಾಮಗಾರಿಗಳನ್ನು ಪೂರ್ಣಗೊಳಿಸಲು ನಿಗಧಿಪಡಿಸಿರುವ ಕಾಲಾವಧಿಯ ವಿವರ ನೀಡುವುದು; (ಕಾಮಗಾರಿವಾರು ಸಂಪೂರ್ಣ ವಿವರ ನೀಡುವುದು) | ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯಡಿ ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಯಲ್ಲಿ ಕೈಗೆತ್ತಿಕೊಳ್ಳಲಾಗಿರುವ ಕಾಮಗಾರಿಗಳ ಸಂಪೂರ್ಣ ವಿವರಗಳನ್ನು ಅನುಬಂಧ ದಲ್ಲಿ ಒದಗಿಸಲಾಗಿದೆ. |
| ಆ) | ಈ ಕಾಮಗಾರಿಗಳು ಪ್ರಸ್ತುತ ಯಾವ ಯಾವ ಹಂತದಲ್ಲಿವೆ; ಈ ಕಾಮಗಾರಿಗಳಿಗಾಗಿ ಇಲ್ಲಿಯವರೆಗೆ ಬಿಡುಗಡೆ ಮಾಡಿರುವ ಅನುದಾನವೆಷ್ಟು; (ಕಾಮಗಾರಿವಾರು ಸಂಪೂರ್ಣ ವಿವರ ನೀಡುವುದು) | ➢ ಟಿ.ಜಿ.ಹಳ್ಳಿ ಮತ್ತು ರಾಮನಗರ ಪೂರಕ ಕಾಲುವೆ ಕಾಮಗಾರಿಯನ್ನು ರೂ. 1325.96 ಕೋಟಿಗಳಿಗೆ ಗುತ್ತಿಗೆ ವಹಿಸಲಾಗಿರುತ್ತದೆ. ಸದರಿ ಕಾಲುವೆಯು ಒಟ್ಟು 52.89 ಕಿ.ಮೀ ಉದ್ದವಿದ್ದು, ಈವರೆಗೂ 41.00 ಕಿ.ಮೀ ಪೈಪ್‌ಲೈನ್ ಕಾಮಗಾರಿ ಪೂರ್ಣಗೊಂಡಿರುತ್ತದೆ. ಪ್ರಸ್ತುತ ಶೇ.70 ರಷ್ಟು ಕಾಮಗಾರಿ ಭೌತಿಕವಾಗಿ ಪೂರ್ಣಗೊಂಡಿರುತ್ತದೆ. ಸದರಿ ಕಾಮಗಾರಿಗಾಗಿ ಈ ವರೆಗೂ ರೂ.743.16 ಕೋಟಿಗಳು ಪಾವತಿಯಾಗಿರುತ್ತದೆ.<br><br>➢ ಗೌರಿಬಿದನೂರು ಪೂರಕ ಕಾಲುವೆ, ಕಾಮಗಾರಿಯನ್ನು ರೂ. 863.48 ಕೋಟಿಗಳಿಗೆ ಗುತ್ತಿಗೆ ವಹಿಸಲಾಗಿರುತ್ತದೆ. ಸದರಿ ಕಾಲುವೆಯು ಒಟ್ಟು 81.60 ಕಿ.ಮೀ ಉದ್ದವಿದ್ದು, ಈವರೆಗೂ 74.00 ಕಿ.ಮೀ. ಪೈಪ್ ಲೈನ್ ಕಾಮಗಾರಿಯು ಶೇ.70 ರಷ್ಟು ಭೌತಿಕವಾಗಿ ಪೂರ್ಣಗೊಂಡಿರುತ್ತದೆ. ಸದರಿ ಕಾಮಗಾರಿಗಾಗಿ ಈ ವರೆಗೂ ರೂ.442.76 ಕೋಟಿಗಳು ಪಾವತಿಯಾಗಿರುತ್ತದೆ. |
| ಇ) | ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲಾ ಭಾಗದಲ್ಲಿ ಈ ಯೋಜನೆ ಕಾಮಗಾರಿಗಳು ಕುಂಠಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಕಾಮಗಾರಿಗಳನ್ನು ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಲಾಗುವುದು? (ವಿವರ ನೀಡುವುದು) | |

| ಕ್ರ. ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| | | ಸದರಿ ಕಾಮಗಾರಿಗಾಗಿ ರೈತರಿಂದ ಜಮೀನನ್ನು ಬಿಡಿಸಿಕೊಳ್ಳಲು, ರೈತರ ಮನವೊಲಿಸಿ ಒಪ್ಪಿಗೆ ಪಡೆದು ಟೆಂಡರ್ ಕ್ಲಾಸ್‌ನಂತೆ "ತ್ರಿಪಕ್ಷೀಯ" ಕರಾರು ಮಾಡಿಕೊಂಡು ರೈತರು ಜಮೀನನ್ನು ಬಿಟ್ಟು ಕೊಡಲು ಒಪ್ಪಿರುವ ಜಾಗದಲ್ಲಿ ಮಾತ್ರ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದ್ದು, ಕಾಮಗಾರಿ ಪ್ರಗತಿಯಲ್ಲಿರುತ್ತದೆ. ಇದರ ಜೊತೆಗೆ, ಸದರಿ ಕಾಮಗಾರಿಗಳಿಗೆ ಭೂಸ್ವಾಧೀನಕ್ಕಾಗಿ 2013 ರ ಭೂಸ್ವಾಧೀನ ಕಾಯ್ದೆಯಂತೆ ಭೂಸ್ವಾಧೀನ ಪ್ರಕ್ರಿಯೆಯು ಪ್ರಗತಿಯಲಿದ್ದು, ಕಾಮಗಾರಿಗೆ ಅಗತ್ಯವಿರುವ ಜಮೀನನ್ನು ಸ್ವಾಧೀನ ಪಡಿಸಿಕೊಂಡು ಕಾಮಗಾರಿಗಳನ್ನು ಡಿಸೆಂಬರ್-2022ರ ಅಂತ್ಯದೊಳಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ. |

**ಸಂಖ್ಯೆ: ಜಸಂಇ 72 ಡಬ್ಲ್ಯೂಎಲ್ಎ 2022**

**(ಗೋವಿಂದ ಎಂ ಕಾರಜೋಳ)**
**ಜಲಸಂಪನ್ಮೂಲ ಸಚಿವರು**

**ಮಾನ್ಯ ವಿಧಾನ ಪರಿಷತ್ತು ಸದಸ್ಯರಾದ ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 355 ಕ್ಕೆ ಅನುಬಂಧ**

ವಿಶ್ವೇಶ್ವರಯ್ಯ ಜಲ ನಿಗಮದಿಂದ ಅನುಷ್ಠಾನಗೊಳಿಸಲಾಗುತ್ತಿರುವ ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯಡಿ ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆ ವ್ಯಾಪ್ತಿಯಲ್ಲಿ ಈ ಕೆಳಕಂಡ ಎರಡು ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.

1. ಟಿ.ಜಿ.ಹಳ್ಳಿ & ರಾಮನಗರ ಫೀಡರ್ ಕಾಲುವೆ ನಿರ್ಮಾಣ ಕಾಮಗಾರಿಯಿಂದ ಟಿ.ಜಿ.ಹಳ್ಳಿ ಜಲಾಶಯ, ರಾಮನಗರ ಜಿಲ್ಲೆಯ ರಾಮನಗರ, ಮಾಗಡಿ, ಚನ್ನಪಟ್ಟಣ ಮತ್ತು ಕನಕಪುರ ತಾಲ್ಲೂಕಿಗೆ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲ್ಲೂಕಿಗೆ ಕುಡಿಯುವ ನೀರನ್ನು ಒದಗಿಸುವುದು ಹಾಗೂ ಸಣ್ಣ ನೀರಾವರಿ ಆಯ್ದ ಕೆರೆಗಳಿಗೆ ಅದರ ಸಾಮರ್ಥ್ಯದ ಶೇ. 50 ರಷ್ಟು ಅಂತರ್ಜಲ ಅಭಿವೃದ್ಧಿಗಾಗಿ ನೀರು ತುಂಬಿಸಲು ಯೋಜಿಸಲಾಗಿದೆ.

2. ಗೌರಿಬಿದನೂರು ಪೂರಕ ಕಾಲುವೆ ನಿರ್ಮಾಣ ಕಾಮಗಾರಿಯಿಂದ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ತಾಲ್ಲೂಕಿಗೆ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರು ತಾಲ್ಲೂಕಿಗೆ ಕುಡಿಯುವ ನೀರನ್ನು ಒದಗಿಸುವುದು ಹಾಗೂ ಸಣ್ಣ ನೀರಾವರಿ ಆಯ್ದ ಕೆರೆಗಳಿಗೆ ಅದರ ಸಾಮರ್ಥ್ಯದ ಶೇ. 50 ರಷ್ಟು ಅಂತರ್ಜಲ ಅಭಿವೃದ್ಧಿಗಾಗಿ ನೀರು ತುಂಬಿಸಲು ಯೋಜಿಸಲಾಗಿದೆ.

ಸದರಿ ಕಾಮಗಾರಿಗಳ ವಿವರಗಳು ಈ ಕೆಳಗಿನಂತಿವೆ:

| ಕ್ರ ಸಂ | ಯೋಜನೆ/ ಕಾಮಗಾರಿ ಹೆಸರು | ಕರಾರು ಮೊತ್ತ | ಗುತ್ತಿಗೆದಾರರ ಹೆಸರು | ನಿಗದಿ ಪಡಿಸಿದ ಕಾಲಾವಧಿ ದಿನಾಂಕ | ಆಗಸ್ಟ್ 2022 ರವರೆಗೆ ಬಿಡುಗಡೆ ಯಾದ ಅನುದಾನ | ಷರಾ |
|---|---|---|---|---|---|---|
| 1 | ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯಡಿಯ ಟಿ.ಜಿ.ಹಳ್ಳಿ & ರಾಮನಗರ ಫೀಡರ್ ಕಾಲುವೆ (ಉದ್ದ 52.89 ಕಿ.ಮೀ) ಹಾಗೂ ಏತ ಘಟಕಗಳು ಒಳಗೊಂಡಂತೆ (ಉದ್ದ 12.06.ಕಿ.ಮೀ) ನಿರ್ಮಾಣ ಕಾಮಗಾರಿ | 1325.96 | ಮೆ॥ ಎಸ್.ಎನ್.ಸಿ – ಎಮ್.ಇ.ಐ.ಎಲ್ (ಜೆ.ವಿ) | ಕರಾರಿನಂತೆ ದಿ: 08.03.2019 ರಿಂದ ದಿ: 07.03.2021 1ನೇ ಕಾಲಾವಧಿ ವಿಸ್ತರಣೆ ದಿ: 07.03.2021 ರಿಂದ 30.09.2022 ಅನುಮೋದನೆಗೊಂಡಿರುತ್ತದೆ | 743.16 | ಕಾಮಗಾರಿ ಪ್ರಗತಿಯಲ್ಲಿದ್ದು, ದಿನಾಂಕ 30.12.2022ರ ವರೆಗಿನ 2ನೇ ಕಾಲಾವಧಿಯ ಪ್ರಸ್ತಾವನೆಯು ಪರಿಶೀಲನಾ ಹಂತದಲ್ಲಿರುತ್ತದೆ. |
| 2 | ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯ ಗೌರಿಬಿದನೂರು ಫೀಡರ್ ಕಾಲುವೆ 0.00 ಕಿ.ಮೀ ಯಿಂದ 81.60 ಕಿ.ಮೀ ವರೆಗೆಎಂ.ಎಸ್ ಪೈಪುಗಳ ವಿತರಣೆ, ಅಳವಡಿಕೆ, ಪರೀಕ್ಷೆ ಹಾಗೂ ಸಿದ್ದಪಡಿಸುವಿಕೆ ಹಾಗೂ ಅಡ್ಡ ಮೋರಿ ಕೆಲಸಗಳು ಒಳಗೊಂಡಂತೆ ಗೌರಿಬಿದನೂರು ಫೀಡರ್ ಕಾಲುವೆ ನಿರ್ಮಾಣ ಕಾಮಗಾರಿ | 863.48 | ಮೆ॥ ಅಡು ಇನ್‌ಪ್ರಾ – ಎಸ್.ಎನ್.ಸಿ (ಜೆ.ವಿ) | ಕರಾರಿನಂತೆ ದಿ: 03.10.2019 ರಿಂದ ದಿ: 02.10.2021 1ನೇ ಕಾಲಾವಧಿ ವಿಸ್ತರಣೆ ದಿ: 03.10.2021 ರಿಂದ 31.12.2022 ಅನುಮೋದನೆಗೊಂಡಿರುತ್ತದೆ | 442.76 | ಕಾಮಗಾರಿ ಪ್ರಗತಿಯಲ್ಲಿದೆ. |
| | **ಒಟ್ಟು ರೂ.** | **2189.44** | | | **1185.92** | |